ಅ.ದಾ ನಂ.319/2014

ಪಿ.ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 17-01-2020

**ಪಾಟೀ ಸವಾಲುಃ**- ಶ್ರೀ ಜಿ.ವಿ.ವಿ ವಕೀಲರಿಂದ

ನನ್ನ ಹೆಸರು ಮಂಜೇಗೌಡ. ಮಲ್ಲಿಕಾರ್ಜುನಗೌಡ ನನ್ನ ತಂದೆ. ನನ್ನ ತಂದೆಗೆ ಕೈಕಾಲು ಸ್ವಾಧೀನ ಇಲ್ಲ. ಅದರ ಬಗ್ಗೆ ಯಾವುದೇ ದಾಖಲೆ ಇಲ್ಲ. 1 ನೇ ಪ್ರತಿವಾದಿ ಮಾಡಿದ ಮಾರಾಟದ ವ್ಯವಹಾರದಲ್ಲಿ ನಾನು ಸೇರಿಲ್ಲ. ಮಾರಾಟದ ವ್ಯವಹಾರ ನನಗೆ ಖುದ್ದಾಗಿ ಗೊತ್ತಿಲ್ಲ ನನ್ನ ತಂದೆ ತಿಳಿಸಿರುತ್ತಾರೆ. 1 ನೇ ಪ್ರತಿವಾದಿ ಈ ದಾವೆಯಲ್ಲಿ ಹಾಕಿರುವ ತಕರಾರನ್ನು ನಾನು ತಿಳಿದುಕೊಂಡಿಲ್ಲ. 1 ನೇ ಪ್ರತಿವಾದಿ ಒ.ಎಸ್. 95/2000 ನ್ನು ಇದೇ ನ್ಯಾಯಾಲಯದಲ್ಲಿ ದಾಖಲಿಸಿದ ಮಾಹಿತಿ ನನಗೆ ಗೊತ್ತಿಲ್ಲ. ಅ.ದಾ. 9/2000 ದಾವೆಯನ್ನು ಬೋರೇಗೌಡ ದಾಖಲಿಸಿದ ಬಗ್ಗೆ ಮಾಹಿತಿ ಇಲ್ಲ. ಅ.ದಾ. 95/2000, 9/2000 ದಾವೆಯಲ್ಲಿ ಪ್ರಸ್ತುತ ದಾವೆಯ ದಾವಾ ಸ್ವತ್ತಿಗೆ 1 ನೇ ಪ್ರತಿವಾದಿ ಹಕ್ಕುದಾರ ಎಂದು ದಾವೆ ದಾಖಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ.

ಸದರಿ ದಾವೆಗಳಿಗೆ ಸಂಬಂಧಪಟ್ಟಂತೆ ಆರ್.ಎಸ್.ಎ 236/2015 ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಲಕ್ಷ್ಮಮ್ಮ ಎಂಬುವವರು ಸಾತೇನಹಳ್ಳಿ ಗ್ರಾಮದಲ್ಲಿ ಯಾರೂ ಇಲ್ಲ ಎಂದರೆ ಸಾಕ್ಷಿಯು ಲಕ್ಷ್ಮಮ್ಮ ಉಃ ಗೌರಮ್ಮ ಕೋಂ ನಂಜುಂಡೇಗೌಡ ಎಂಬುವವರು ನಮ್ಮ ಊರಿನಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ಎಂಬುವವರಿಗೆ 1 ನೇ ಪ್ರತಿವಾದಿ ಯಾವುದೇ ಸ್ವತ್ತನ್ನು ಕ್ರಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿ ಲಕ್ಷ್ಮಮ್ಮ ಎಂಬುವವರಿಗೆ ಮಾರಾಟ ಮಾಡಿದ್ದು, 2 ನೇ ಪ್ರತಿವಾದಿ ಲಕ್ಷ್ಮಮ್ಮರವರಿಂದ ನಾವು ಕ್ರಯಕ್ಕೆ ಪಡೆದಿರುತ್ತೇವೆ . 1 ನೇ ಪ್ರತಿವಾದಿ, 2 ನೇ

ಪ್ರತಿವಾದಿಗೆ ಯಾವುದೇ ಕ್ರಯಪತ್ರ ಬರೆದುಕೊಟ್ಟಿಲ್ಲ, 2 ನೇ ಪ್ರತಿವಾದಿ ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸಲು ನನ್ನ ತಂದೆ ಮತ್ತು 2 ನೇ ಪ್ರತಿವಾದಿ ಸೇರಿಕೊಂಡು ಕ್ರಯಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಕ್ರಯಪತ್ರದಲ್ಲಿರುವ ಸ.ನಂ ಅನ್ನು ತಿದ್ದುಪಡಿ ಮಾಡಿಕೊಡಿ ಎಂದು ಕ್ರಮ ಜರುಗಿಸಿದರೆ ಸತ್ಯಾಂಶ ತಿಳಿಯುತ್ತದೆ ಎಂದು ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ

ದಿಃ 22-04-2016 ರಲ್ಲಿ ನನ್ನ ನೋಟೀಸಿಗೆ 1 ನೇ ಪ್ರತಿವಾದಿ ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸರಿ. ಪ್ರತ್ಯುತ್ತರದಲ್ಲಿ ಏನಿದೆ ನಾನು ತಿಳಿದುಕೊಂಡಿಲ್ಲ. ಓ.ಎಸ್. 9/2000 ದಾವೆಯ ವಿದ್ಯಮಾನಗಳನ್ನು ನಾನು ತಿಳಿದುಕೊಂಡಿಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವಂತ ಜಮೀನಾಗಿದ್ದು, ಅದನ್ನು ಲಪಟಾಯಿಸಲು ಕ್ರಯಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ .

**<u>ಮರುವಿಚಾರಣೆ ಇಲ್ಲ.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ